ANUBHAVS



# ಸಂಕಟಮೋಚನ ನಾಮ ನಿನ್ನದು

© Copyright 2010, Manasamarthyadata.com

- ಶ್ರೀ. ಆಶೀಷ್ ಕಾತ್ರೇಕರ್, ಕ್ಯಾಲಿಫೋರ್ನಿಯಾ

ನನಗೆ ಪ.ಪೂ. ಬಾಪೂರವರು ಕೊಟ್ಟಿರುವಂತಹ ಅನುಭವಗಳನ್ನು ನಿಮಗೆ ಹೇಳುವುದರಲ್ಲಿ ನನಗೆ ಆನಂದ ಸಿಗುತ್ತದೆ.

ನಾನೊಬ್ಬ ಸಾಂತಾಕ್ಲಾರಾ, ಕ್ಯಾಲಿಫೋರ್ನಿಯಾ, ಅಮೆರಿಕದ ನಿವಾಸಿ. ನನಗೆ ನನ್ನ ವ್ಯವಸಾಯದ ನಿಮಿತ್ತವಾಗಿ ಯುರೋಪಿಗೂ ಹೋಗಬೇಕಾಗುತ್ತದೆ. ಎಪ್ರಿಲ್ 2004 ಕೊನೆಯ ವಾರದಲ್ಲಿ ನಾನು ಬೋಸ್ಟನ್ ನಗರದಲ್ಲಿ ಒಂದು ಕಾನ್ಫರೆನ್ಸಿನಲ್ಲಿ ಭಾಗವಹಿಸಿ ಅಲ್ಲಿಂದ ಝೂರಿಚ್ ಮತ್ತು ಲಂಡನ್‌ಗೆ ಹೋಗಬೇಕಾಗಿತ್ತು. ಈ ಟ್ರಿಪ್ ಮುಗಿದ ನಂತರ ನಾನು ಕೆಲವು ದಿನಗಳ ಮಟ್ಟಿಗೆ ರಜೆ ಪಡೆದು ಭಾರತದ ಹರಿಧ್ವಾರದಲ್ಲಿ ನಡೆಯುವ ಒಂದು ಯೋಗ ಶಿಬಿರದಲ್ಲಿ ಭಾಗವಹಿಸಬೇಕಾಗಿತ್ತು. ಈ ಟ್ರಿಪ್‌ಗೆ ಹೊರಡುವ ಕೆಲವು ದಿನಗಳ ಮುಂಚೆಯೇ ನನಗೆ ನನ್ನ ತಂದೆ ಮೇ ತಿಂಗಳಲ್ಲಿ ಮುಂಬಯಿಯಲ್ಲಿ ನಡೆಯಲಿರುವ ಗಾಯತ್ರಿ ಜಪ ಉತ್ಸವದ ಬಗೆಗೆ ತಿಳಿಸಿದ್ದರು. ಆದುದರಿಂದ ನಾನು ನನ್ನ ಭಾರತ ಭೇಟಿಯ ವೇಳಾಪತ್ರಿಕೆಯಲ್ಲಿ ಕೊನೆಯ ದಿವಸ ಅಂದರೆ ಜಪದ ಮೊದಲನೇ ದಿವಸ ಈ ಜಪ ಉತ್ಸವದಲ್ಲಿ ಕೆಲವು ತಾಸುಗಳವರೆಗೆ ಪಾಲ್ಗೊಂಡು ನಂತರ ಕ್ಯಾಲಿಫೋರ್ನಿಯಾಕ್ಕೆ ಹಿಂತಿರುಗುವುದು ಎಂದು ನಿರ್ಧರಿಸಿದ್ದೆನು.

ಈ ಎಲ್ಲಾ ಬದಲಾವಣೆಗಳನ್ನು ನಾನು ನನ್ನ ವೇಳಾಪತ್ರಿಕೆಯಲ್ಲಿ ಹೊಂದಿಸಿಕೊಳ್ಳಲು ಸಾಧ್ಯವಾದುದು ನನ್ನ ಭಾಗ್ಯವೇ ಸರಿ. ನಾನು ಬೋಸ್ಟನ್ ಕಾನ್ಫರೆನ್ಸ್ ಅಟೆಂಡ್ ಮಾಡಿ ಅಲ್ಲಿಂದ ಪ್ಯಾರಿಸ್‌ನಲ್ಲಿ ಸ್ಟಾಪ್ ಓವರ್ ತೆಗೆದುಕೊಳ್ಳಲಿಕ್ಕಾಗಿ ಪ್ರಯಾಣಿಸುವವನಿದ್ದೆನು. ನನ್ನ ವಿಮಾನ ಉಡ್ಡಾಣಕ್ಕೆ ಸಮಯಾವಕಾಶವಿದ್ದು ನನ್ನ ಹತ್ತಿರ ಸ್ವಲ್ಪ ಸಮಯ ಉಳಿದಿದ್ದ ಕಾರಣ ಬೋಸ್ಟನ್ ನಗರದ ಮುಖ್ಯ ಭಾಗದಲ್ಲಿ ವಾಸವಾಗಿದ್ದಂತಹ ನನ್ನ ತುಂಬಾ ಆತ್ಮೀಯ ಮಿತ್ರನೊಬ್ಬನನ್ನು ಭೇಟಿಯಾಗಿ ಬರುವಾ ಎಂದುಕೊಂಡು ಅಲ್ಲಿಗೆ ಹೋದೆನು. ನಾವಿಬ್ಬರೂ ಒಟ್ಟಿಗೆ ಮಧ್ಯಾಹ್ನದ ಊಟ ಮುಗಿಸಿದೆವು. ನಂತರ ಆತ ನನ್ನನ್ನು ವಿಮಾನ ನಿಲ್ದಾಣಕ್ಕೆ ತಲುಪಿಸಲು ಅಲ್ಲಿಯೇ ಹತ್ತಿರವಿದ್ದ ಟ್ಯಾಕ್ಸಿ ಸ್ಟ್ಯಾಂಡಿನ ಲೈನ್‌ನಲ್ಲಿ

ನಿಂತಿರುವಾಗ ಒಂದು ಲಿಮೋಝಿನ್‌ನ ಚಾಲಕನು ನಮ್ಮ ಹತ್ತಿರ ಬಂದು ತಾನು ಟ್ಯಾಕ್ಸಿಯ ದರದಲ್ಲಿಯೇ ನಿಮ್ಮನ್ನು ವಿಮಾನ ನಿಲ್ದಾಣಕ್ಕೆ ತಲುಪಿಸುತ್ತೇನೆ ಎಂದು ಹೇಳಿದನು. ನಾನು ಕೂಡಲೇ ಆನಂದದಿಂದ ಲಿಮೋಝಿನ್‌ನಲ್ಲಿ ಕುಳಿತು ನನ್ನ ಮಿತ್ರನಿಗೆ ವಿದಾಯ ಹೇಳಿದೆನು.

ಲಿಮೋಝಿನ್‌ನ ಚಾಲಕ ತುಂಬಾ ಒಳ್ಳೆಯವನಾಗಿದ್ದನು. ಅವನು ದಾರಿಯಲ್ಲಿ ನನ್ನೊಂದಿಗೆ ತುಂಬಾ ಹರಟೆ ಹೊಡೆದನು ಹಾಗೂ ನನ್ನನ್ನು ಡೆಲ್ಟಾ ಟರ್ಮಿನಲ್ಸ್‌ನಲ್ಲಿ ಇಳಿಸಿದನು. ನಾನು ಆತನಿಗೆ ಹಣ ಕೊಟ್ಟು ನನ್ನ ಸಾಮಾನುಗಳನ್ನು ತೆಗೆದುಕೊಂಡು ವಿಮಾನ ನಿಲ್ದಾಣದತ್ತ ನಡೆಯತೊಡಗಿದೆನು. ನಡೆಯುತ್ತಿರುವಾಗ ನಾನು ನನ್ನ ಪ್ಯಾಂಟಿನ ಹಿಂದಿನ ಜೇಬಿಗೆ ಕೈಹಾಕಿದಾಗ ನನ್ನ ಪರ್ಸ್ ಇರಲಿಲ್ಲ ನಾನು ಲಿಮೋಝಿನ್ ಚಾಲಕನನ್ನು ನೋಡಲು ಹಿಂತಿರುಗಿದಾಗ ಅವನು ಹೊರಟು ಹೋಗಿದ್ದನು. ನನ್ನ ಮಿತ್ರನಿಗೆ ಫೋನ್ ಮಾಡಿದಾಗ ಆತ ತನಗೇನೂ ತಿಳಿಯದೆಂದೂ ನಾವು ಊಟ ಮಾಡಿದ ರೆಸ್ಟೋರೆಂಟ್‌ನಲ್ಲಿ ಹೋಗಿ ನೋಡುವೆನೆಂದೂ ಹೇಳಿದನು. ಆ ಪರ್ಸ್‌ನಲ್ಲಿ ನನ್ನ ಐಡೆಂಟಿಟಿ ಕಾರ್ಡ್, ನನ್ನ ಕ್ರೆಡಿಟ್ ಕಾರ್ಡ್‌ಗಳು, ಡಾಲರ್ಸ್ ಮತ್ತು ಇತರ ಮಹತ್ವದ ವಸ್ತುಗಳಿದ್ದವು. ನನ್ನ ಪರ್ಸ್ ಸಿಗದೇ ನಾನು ಪ್ಯಾರಿಸ್‌ಗೆ ಹೋಗುವುದು ಸಾಧ್ಯವೇ ಇರಲಿಲ್ಲ, ನನ್ನ ಹತ್ತಿರ ಕ್ಯಾಲಿಫೋನಿರ್ಯಾಕ್ಕೆ ಹಿಂತಿರುಗಲೂ ಹಣವಿರಲಿಲ್ಲ, ನಾನು ಬೋಸ್ಟನ್ ವಿಮಾನ ನಿಲ್ದಾಣದಲ್ಲಿಯೇ ವಿಮನಸ್ಕನಾಗಿ ನಿಂತಿದ್ದೆನು. ಕೆಲವೇ ತಾಸುಗಳಲ್ಲಿ ನನ್ನ ಪ್ಯಾರಿಸ್‌ನ ವಿಮಾನ ಹೊರುಡುವುದರಲ್ಲಿತ್ತು. ನಾನು ಪೊಲೀಸರಿಗೆ ದೂರು ಕೊಡುವ ಬಗ್ಗೆ ಯೋಚಿಸುತ್ತಿದ್ದೆ ಹಾಗೂ ನಂತರ ನನ್ನ ಸೆಕ್ರೆಟರಿಗೆ ಫೋನ್ ಮಾಡಿ ಮರುದಿನದ ಕ್ಯಾಲಿಫೋರ್ನಿಯಾದ ಟಿಕೆಟ್ ಬುಕ್ ಮಾಡಲು ಹೇಳುವುದೊಂದೇ ಈಗ ಉಳಿದಿರುವ ಏಕಮಾತ್ರ ಪರ್ಯಾಯವಾಗಿತ್ತು.

ನನ್ನ ಯುರೋಪಿನ ಟ್ರಿಪ್ಪಂತೂ ರದ್ದಾದಂತೆಯೇ. ಆದರೆ ಭಾರತಕ್ಕೆ ಹೋಗುವುದು ಹೇಗೆ ಹೊಂದಿಸುವುದು ಎಂಬುದೇ ಒಂದು ಪ್ರಶ್ನೆಯಾಗಿತ್ತು. ನಾನು ನನ್ನ ವೇಳಾಪತ್ರಿಕೆಯಲ್ಲಿ ಗಾಯತ್ರಿ ಜಪವನ್ನು ಸೇರಿಸಿಕೊಂಡಿದ್ದರಿಂದ ತುಂಬಾ ಆನಂದದಿಂದೆದ್ದೆನು. ಆದರೆ, ಈ ಜಪದಲ್ಲಿ ಭಾಗವಹಿಸಿ ಬಾಪೂರವರ ದರ್ಶನವನ್ನು ಪಡೆಯುವುದು ನನ್ನ ಹಣೆಬರಹದಲ್ಲಿಲ್ಲವೇ? ಎಂಬ ನಾನಾ ತರಹದ ವಿಚಾರಗಳು ಮನದಲ್ಲಿ ಮೂಡತೊಡಗಿದವು.

ನಾನು ನನ್ನ ಪರ್ಸ್‌ನಲ್ಲಿ ಬಾಪೂರವರ ಫೋಟೋ ಇಟ್ಟಿದ್ದೆನು. ಸಂಕಟ ಸಮಯದಲ್ಲಿ ಆದು ಆಧಾರವೆನಿಸುತ್ತಿತ್ತು. ಆದರೆ ಇಂದು ಅದೂ ಕಳೆದು ಹೋಗಿದೆ. ವಿಮಾನ ನಿಲ್ದಾಣದಲ್ಲಿ ಮುಂದೇನು

ಮಾಡುವುದೆಂದು ತಿಳಿಯದೇ ನಿಂತಿದ್ದೆನು. ಇಂದು ಬಾಪೂರವರ ಫೋಟೋದ ಮಹತ್ವ ಅರಿವಾಗುತ್ತಿತ್ತು. ಆಗ ಮನದಲ್ಲಿ ವಿಚಾರ ಮೂಡಿತು. ನನ್ನ ಬಾಪೂ ನನ್ನಿಂದ ದೂರವಾಗುವುದು ಹೇಗೆ ಸಾಧ್ಯ? ಅವರು ನನ್ನೊಂದಿಗೆಯೇ ಇರುತ್ತಾರೆ. ನಾನು ಮನಸ್ಸಿನಲ್ಲಿಯೇ ಪ.ಪೂ.ಬಾಪೂರವರಿಗೆ ವಂದಿಸಿ ನನ್ನ ಪರ್ಸ್ ಸಿಗುವಂತಾಗಲಿ ಎಂದು ಪ್ರಾರ್ಥಿಸಿಕೊಂಡೆ. ಅಷ್ಟರಲ್ಲಿ ಏನಾಶ್ಚರ್ಯ! ಈ ವಿಚಾರಗಳು ನನ್ನ ಮನಸ್ಸಿನಲ್ಲಿ ಮೂಡುತ್ತಿರುವಂತೆಯೇ ನಾನು ನಿಂತಿದ್ದ ರಸ್ತೆಯ ಎದುರು ಬದಿಯ ರಸ್ತೆಯ ಬದಿಯಲ್ಲಿ ಒಬ್ಬ ಡ್ರೈವರ್ ನನ್ನ ಕಡೆಗೆ ಕೈಯಾಡಿಸುತ್ತಿದ್ದನು. ಅವನು ತನ್ನ ಕೈಯಲ್ಲಿ ಏನನ್ನೋ ಹಿಡಿದಿರುವಂತೆ ಕಾಣುತ್ತಿತ್ತು. ನನಗೆ ಆಶ್ಚರ್ಯದ ಒಂದು ಸುಖದಾಯಕ ಆಘಾತವಾಗಿತ್ತು. ಆ ಲಿಮೋಸಿನ್‌ನ ಡ್ರೈವರ್ ಕೈಯಲ್ಲಿ ನನ್ನ ಪರ್ಸ್ ಹಿಡಿದುಕೊಂಡು ನನ್ನೆದುರಿಗೆ ನಿಂತಿದ್ದನು. ನಾನು ಓಡುತ್ತಲ್ಲೇ ಅವನ ಹತ್ತಿರ ಹೋದೆನು. ಅವನಿಗೆ ಅನಂತಾನಂತ ಧನ್ಯವಾದಗಳನ್ನು ಅರ್ಪಿಸಿದೆನು. ನಾನು ನನ್ನ ಪರ್ಸ್‌ನ್ನು ಚೆಕ್ ಮಾಡಿದೆನು. ಅದರಲ್ಲಿದ್ದ ಪ್ರತಿಯೊಂದು ವಸ್ತುವು ಇದ್ದ ಹಾಗೆಯೇ ಇದ್ದಿತು. ನಾನು ಆ ಡ್ರೈವರ್‌ನಿಗೆ ಅವನ ಪ್ರಾಮಾಣಿಕತೆಯ ಬಹುಮಾನವನ್ನೂ ಕೊಟ್ಟೆನು. ನಾನೀಗ ತುಂಬಾ ಖುಷಿಯಾಗಿದ್ದೆನು. ನನ್ನ ಎಲ್ಲಾ ಕಾರ್ಯಕ್ರಮವೂ ಕೂಡಾ ಈಗ ನಿರ್ಧರಿಸಿದಂತೆಯೇ ನೆರವೇರಬಹುದಾಗಿದ್ದಿತು.

ಲಿಮೋಸಿನ್‌ನ ಡ್ರೈವರ್ ಹೇಳಿದನು ಅವನು ನನ್ನನ್ನು ಇಳಿಸಿ ಹೋಗುತ್ತಿರುವಾಗ ಸಹಜವಾಗಿಯೇ ಹಿಂದಿನ ಸೀಟಿನ ಕಡೆಗೆ ನೋಡಿದಾಗ ನನ್ನ ಪರ್ಸ್ ಅವನ ಕಣ್ಣಿಗೆ ಕಂಡಿತು. ಈಗ ನನ್ನನ್ನು ಹೇಗೆ ಹುಡುಕುವುದು ಅವನಿಗೆ ಯೋಚನೆಯಾಯಿತು. ಆದರೂ ಕೂಡಾ ಒಂದು ಚಾನ್ಸ್ ನೋಡುವಾ ಎಂದುಕೊಂಡು ನನ್ನನ್ನು ಇಳಿಸಿದಲ್ಲಿಗೇ ಬಂದು ನೋಡತೊಡಗಿದನು. ನಾನು ಕೂಡಾ ವಿಚಾರ ಮಾಡುತ್ತಾ, ಅಲ್ಲಿಯೇ ನಿಂತಿದ್ದುದರಿಂದ ಅವನಿಗೆ ಸಿಕ್ಕೆದೆನು. ಪರ್ಸ್ ಕೈಗೆ ಸಿಕ್ಕಿದ ನಂತರ ನಾನು ಬಾಪೂರವರಿಗೆ ಧನ್ಯವಾದಗಳನ್ನು ಅರ್ಪಿಸಿದೆನು.

ನಾನು ನಿರ್ಧರಿಸಿದ ಪ್ರಕಾರ ವಿಮಾನ ಏರಿದೆನು. ಯುರೋಪಿನ ಟ್ರಿಪ್ ಮುಗಿಯಿತು. ಹರಿಧ್ವಾರದ ಯೋಗಶಿಬಿರದಲ್ಲಿ ಸಹಭಾಗಿಯಾದೆನು. ಹಾಗೂ ಮುಂಬಯಿಯಲ್ಲಿ ಗಾಯತ್ರಿ ಜಪದಂದು ಹಾಜರಿದ್ದೆನು. ಇದೆಲ್ಲವೂ ಸಾಧ್ಯವಾದುದು ಬಾಪೂ ಕೃಪೆಯಿಂದಲೇ. ಈ ಅನುಭವವನ್ನು ನಾನೆಂದಿಗೂ ಮರೆಯುವುದು ಸಾಧ್ಯವಿಲ್ಲ, ನನ್ನನ್ನು ಸಂಕಟದಿಂದ ಪಾರು ಮಾಡಿದಂತೆಯೇ ಬಾಪೂ ಎಲ್ಲರನ್ನು ಕಾಪಾಡಲಿ ಎಂಬುದೊಂದೇ ನನ್ನ ಪ್ರಾರ್ಥನೆ.

ANUBHAVS

# HARI OM

© Copyright 2010, Manasamarthyadata.com

manasamarthyadata.com